**ಕರ್ನಾಟಕ ಸರ್ಕಾರ**

**<u>ಕಾಲೇಜು ಶಿಕ್ಷಣ ಇಲಾಖೆ</u>**

ಸಂಖ್ಯೆ: ಕಾಶಿಇ/ಶೈವಿ/132/ತೆ.ದ.ಪ./2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ:16.09.2017

**ಸುತ್ತೋಲೆ**

ವಿಷಯ: ಸರ್ಕಾರಕ್ಕೆ ಬರುವ ತೆರಿಗೆಯೇತರ ಆದಾಯಗಳ ದರ ಪರಿಷ್ಕರಣೆ ಕುರಿತು

ಉಲ್ಲೇಖ: 1. ಸರ್ಕಾರದ ದಿನಾಂಕ:16/9/2017ರ ಪತ್ರ ಸಂ: ಶಿಇ 369 ಐಎಫ್(ಬಿ&ವಿ) 2017.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ದಿನಾಂಕ: 11/08/2017ರ ಅರೆ ಸರ್ಕಾರಿ ಪತ್ರ ಸಂ: ಆಇ 30 ಉಕಾ (ಆ&ಸಂ) 2017.

* * * * * *

ಸರ್ಕಾರಕ್ಕೆ ಬರುವ ತೆರಿಗಯೇತರ ಆದಾಯಗಳ ದರ ಪರಿಷ್ಕರಣೆಯ ಸಲುವಾಗಿ ಇಲಾಖೆಯಿಂದ ಸರ್ಕಾರಕ್ಕೆ ಜಮೆಯಾಗಿರುವ ಮಾಹಿತಿಯನ್ನು ತುರ್ತಾಗಿ ಸರ್ಕಾರಕ್ಕೆ ಸಲ್ಲಿಸಬೇಕಿರುತ್ತದೆ. ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಕಛೇರಿಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳನ್ನು ಮತ್ತು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಶುಲ್ಕಗಳನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗುತ್ತಿದ್ದು, ಪರಿಶೀಲಿಸಲಾಗಿ 2006-07 ರಿಂದ 2014-15 ನೇ ಸಾಲಿನವರೆವಿಗೆ ಕಾಲೇಜು ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಜಮೆಯ ಲೆಕ್ಕಶೀರ್ಷಿಕೆ 0202-01-103-2-01 ಮತ್ತು 0202-01-103-1-02 ಗಳಿಗೆ ಜಮೆಯಾಗಿರುವುದು ಕಂಡುಬರುತ್ತಿಲ್ಲ.

ಆದ್ದರಿಂದ ಅಧೀನ ಕಛೇರಿ/ಕಾಲೇಜುಗಳಿಂದ ವರ್ಷವಾರು ಮತ್ತು ಲೆಕ್ಕಶೀರ್ಷಿಕೆವಾರು ಸರ್ಕಾರಕ್ಕೆ ಮಾಡಲಾದ ಜಮೆಗಳ ಮಾಹಿತಿಯನ್ನು ತುರ್ತಾಗಿ ಕೆಳಕಂಡ ನಮೂನೆಯಲ್ಲಿ Excel Format ನಲ್ಲಿ ತಯಾರಿಸಿ ಸಾಫ್ಟ್ ಕಾಪಿಯನ್ನು ಈ ಕಛೇರಿಯ ಇಮೇಲ್‌ವಿಳಾಸ: dce.academic.govt.receipts@gmail.com ಕ್ಕೆ ಇಂದೇ ಕಳುಹಿಸುವಂತೆ ಹಾಗೂ ಸಹಿ ಮಾಡಿದ ದೃಢೀಕೃತ ಪ್ರತಿಯನ್ನು ಸಹ ಕಳುಹಿಸಲು ಸೂಚಿಸಲಾಗಿದೆ

**ನಮೂನೆ**

| Name of the College: | | | | | | | | | | | | |
|---|---|---|---|---|---|---|---|---|---|---|---|---|
| College ID | | | | | | | | | | | | |
| Head of Account | **Year wise amount remitted** | | | | | | | | | | | |
| | 2006 -07 | 2007 -08 | 2008 -09 | 2009 -10 | 2010 -11 | 2011 -12 | 2012 -13 | 2013 -14 | 2014 -15 | 2015 -16 | 2016 -17 | 2017 -18 |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ

1. ಇಲಾಖಾವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ
2. ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
3. ಲೆಕ್ಕಾಧಿಕಾರಿಗಳು, ಹಣ ಮತ್ತು ಪಾವತಿ, ಕೇಂದ್ರಕಛೇರಿ, ಬೆಂಗಳೂರು
4. ಮ್ಯಾನೇಜರ್, ಹಣ ಮತ್ತು ಪಾವತಿ, ಕೇಂದ್ರಕಛೇರಿ, ಬೆಂಗಳೂರು

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ
2. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ.
3. ಕಛೇರಿ ಪ್ರತಿ.